# ಕರ್ನಾಟಕ ಸರಕಾರ

## ವಾಣಿಜ್ಯ ತೆರಿಗೆ ಇಲಾಖೆ

**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌವತೆ ಧಾರವಾಡ ವಿಭಾಗ,**
**3ನೇ ಮಹಡಿ, ಡಿ.ಸಿ. ಕಂಪೌಂಡ, ಧಾರವಾಡ-580001.**

**ಸಂಖ್ಯೆ: ವಾ.ತೆ.ಜಂ.ಆ/ಡಿ.ವಿ.ಓ/ಧಾ/ರಕ್ಷಣೆ/2010-2011/**
**ದಿನಾಂಕ: 23/12/2010.**

## ಟೆಂಡರ ನೋಟಿಫಿಕೇಶನ

ಟೆಂಡರಗಳನ್ನು ಎರಡು ಲಕೋಟೆಗಳಲ್ಲಿ ಸಲ್ಲಿಸುವ ಪದ್ಧತಿಯಲ್ಲಿ ಕರೆಯಲಾಗಿದ್ದು, ಟೆಂಡರನ್ನು ವಾಣಿಜ್ಯ ತೆರಿಗೆ ಇಲಾಖೆಯ ಧಾರವಾಡ ವಿಭಾಗದ ಧಾರವಾಡ ಡಿ.ಸಿ ಕಂಪೌಂಡಿನಲ್ಲಿರುವ **"ತೆರಿಗೆ ಭವನ"** ಮತ್ತು ನವನಗರದಲ್ಲಿರುವ **ವಾಣಿಜ್ಯ ತೆರಿಗೆ ಸಂಕೀರ್ಣಕ್ಕೆ** ಭದ್ರತಾ ಸಿಬ್ಬಂದಿಗಳನ್ನು ಸೆಕ್ಯುರಿಟಿ ಏಜೆನ್ಸಿಗಳ ಮೂಲಕ ದಿನದ 24ಗಂಟೆ ಕಾವಲು ಕಾಯಲು ಲೇಬರ ಕಾಯ್ದೆಯ ಪ್ರಕಾರ ಅರ್ಜಿಯನ್ನು ಈ ಕಚೇರಿಯ ಷರತ್ತು ಹಾಗೂ ನಿಬಂದನೆಗಳಂತೆ ಸಲ್ಲಿಸುವುದು. ಸದರಿ ಟೆಂಡರ ಹಾಗೂ ಪ್ರಸ್ತಾವನೆ ಅರ್ಜಿ (Request for proposal) (RFP)ಗಳನ್ನು website http//: ctax.kar.nic.in ನಿಂದ ಡೌನಲೋಡ ಮಾಡಿಕೊಂಡು ಸ್ಟೇಟ ಬ್ಯಾಂಕ ಆಫ್ ಇಂಡಿಯಾದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಲೆಕ್ಕ ಶೀರ್ಷಿಕೆ 0040-00-102-0-06 ಕ್ಕೆ ಜಮೆ ಮಾಡಿದ ಚಲನನೊಂದಿಗೆ ಟೆಂಡರ ಫಾರ್ಮನ್ನು ಈ ಕಚೇರಿಗೆ ಸಲ್ಲಿಸಬಹುದು. ಅಲ್ಲದೇ ದಿನಾಂಕ: 27/12/2010 ರಿಂದ 30/12/2010ರ 4:00ಗಂಟೆ ವರೆಗೆ ಕಚೇರಿಯ ಸಮಯದಲ್ಲಿ ಟೆಂಡರ ಫಾರ್ಮಗಳನ್ನು, ಪ್ರತಿ ಟೆಂಡರ ಅರ್ಜಿ ಮೌಲ್ಯ ರೂ. 200/- + 13.5 ವ್ಯಾಟನ್ನು ಸೇರಿ ಒಟ್ಟು ರೂ. 227/-ಗಳನ್ನು ನೀಡಿ ಈ ಕಚೇರಿಯಿಂದಲೂ ಪಡೆಯಬಹುದು. ಸದರಿ ಮೊತ್ತವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಟೆಂಡರಗಾಗಿ ಅರ್ಜಿಯನ್ನು ಸಲ್ಲಿಸುವವರು ಎರಡು ಕಟ್ಟಡಗಳ ಭದ್ರತೆಗಾಗಿ ಪ್ರತ್ಯೇಕ ಟೆಂಡರ ಫಾರ್ಮಗಳಲ್ಲಿ ಅರ್ಜಿಯನ್ನು ಸಲ್ಲಿಸುವುದು.

ಭದ್ರತಾ ಸಿಬ್ಬಂದಿಗಳನ್ನು ಪೂರೈಸುವ ಭದ್ರತಾ ಎಜೆನ್ಸಿಗಳು ಟೆಂಡರನಲ್ಲಿ ವಿಧಿಸಿರುವ ಎಲ್ಲ ಷರತ್ತುಗಳನ್ನು ಪೂರೈಸಬೇಕು.

J.C.C.T. (ADMN)
VAT DIVN. DWD.

**ಮೊದಲನೇಯ ಲಕೋಟೆ ಟೆಕ್ನಿಕಲ್/ಅರ್ಹತಾಪೂರ್ವ ಬಿಡ್‌ಗೆ ಸಂಬಂಧ ಪಟ್ಟಂತೆ ಮಾಹಿತಿಯನ್ನು ಹೊಂದಿರತಕ್ಕದ್ದು:**

(1) ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ನಿಗದಿತ ನಮೂನೆಯಲ್ಲಿ (RFP ಗೆ ಲಗತ್ತಿಸಿದ ಅನುಬಂಧ-1ರಲ್ಲಿ ಕಾಣಿಸಿರುವಂತೆ) ಎಲ್ಲ ವಿವರಗಳನ್ನು ನಮೂದಿಸಿರಬೇಕು.

(2) ಭಾರತೀಯ ಆದಾಯ ತೆರಿಗೆ ಕಾಯ್ದೆ – 1957 ರಂತೆ ಇಲಾಖೆಯವರು ನೀಡಿದ ಪಾನ ನಂಬರನ ಮಾಹಿತಿಯನು ನೀಡಬೇಕು.

(3) ಬಿಡ್ ಸಲ್ಲಿಸುವ ಭದ್ರತಾ ಏಜೆನ್ಸಿಗಳು ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯದ ವಿವಿಧ ಇಲಾಖೆಗಳಲ್ಲಿ ಭದ್ರತಾ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ಪೂರೈಸಿದ ಅನುಭವನ್ನು ಹೊಂದಿರಬೇಕು. ಹಾಗೂ ಪ್ರಥಮವಾಗಿ ಮೊದಲನೆಯ ಲಕೋಟೆಯಾದ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಲಕೋಟೆಯನ್ನು ಸೀಲು ಮಾಡಿ ಅದರ ಮೇಲೆ **"ಭದ್ರತಾ ಸಿಬ್ಬಂದಿಗಳ ಪೂರೈಕೆಯ ಬಗ್ಗೆ ಟೆಂಡರು (ಟೆಕ್ನಿಕಲ್ ಬಿಡ್)"** ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು.

**ಎರಡನೆಯ ಲಕೋಟೆ-ಫೈನಾನ್ಶಿಯಲ್ ಬಿಡ್‌ಗೆ ಸಂಬಂಧಿಸಿರತಕ್ಕದ್ದು :-**

1)ಫೈನಾನ್ಸಿಯಲ್ ಬಿಡ್‌ಗೆ ಸಂಬಂಧಿಸಿದ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ (ಆರ್.ಎಫ್.ಪಿ.ಗೆ ಲಗತ್ತಿಸಿದ ಅನುಬಂಧ-2ರಲ್ಲಿ ಕಾಣಿಸಿರುವಂತೆ) ಎಲ್ಲ ವಿವರಗಳನ್ನು ನಮೂದಿಸಿರಬೇಕು. ಹಾಗೂ ಸದರಿ ಲಕೋಟೆಯನ್ನು ಸೀಲು ಮಾಡಿ ಅದರ ಮೇಲೆ **"ಭದ್ರತಾ ಸಿಬ್ಬಂದಿಗಳ ಪೂರೈಕೆಯ ಬಗ್ಗೆ ಟೆಂಡರು (ಫೈನಾನ್ಸಿಯಲ್ ಬಿಡ್)" (ಧಾರವಾಡದ ಕಟ್ಟಡಕ್ಕಾಗಿ** ಅಥವಾ **ನವನಗರದ ಕಟ್ಟಡಕ್ಕಾಗಿ)** ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು.

2) ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನ ಲಕೋಟೆ ಹಾಗೂ ಫೈನಾನ್ಸಿಯಲ್ ಬಿಡ್‌ಗೆ ಸಂಬಂಧಿಸಿದ ಲಕೋಟೆ, ಈ 2 ಲಕೋಟೆಗಳನ್ನು ದೊಡ್ಡದಾದ ಲಕೋಟೆಯಲ್ಲಿ ಹಾಕಿ ಸೀಲು ಮಾಡಿ ಅದರ ಮೇಲೆ **"ಭದ್ರತಾ ಸಿಬ್ಬಂದಿಗಳ ಪೂರೈಕೆಯ ಬಗ್ಗೆ ಟೆಂಡರು"** (ಧಾರವಾಡದ ಕಟ್ಟಡಕ್ಕಾಗಿ ಅಥವಾ ನವನಗರದ ಕಟ್ಟಡಕ್ಕಾಗಿ) ಎಂದು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು. ಹಾಗೂ ಈ ಲಕೋಟೆಯು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, 3ನೇ ಅಂತಸ್ತು, "ತೆರಿಗೆ ಭವನ" ಡಿ.ಸಿ. ಕಂಪೌಂಡ, ಧಾರವಾಡ ಇವರ ಹೆಸರಿನಲ್ಲಿರಬೇಕು. ಹಾಗೂ ಮೇಲ್ಕಾಣಿಸಿದ ಟೆಂಡರುಗಳು ಯಾವುದೇ ಕರಾರು ಅಥವಾ ಷರತ್ತಿಗೆ ಒಳಪಟ್ಟಿರಬಾರದು. ಒಂದುವೇಳೆ ಯಾವುದೇ ಕರಾರು ಅಥವಾ ಷರತ್ತುಗಳು ವಿಧಿಸಿದ್ದು ಕಂಡು ಬಂದಲ್ಲಿ ಅವುಗಳನ್ನು ತಿರಸ್ಕರಿಸಲಾಗುವುದು. ಹಾಗೂ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರದಾರರ ಫೈನಾನ್ಸಿಯಲ್ ಬಿಡ್‌ಗಳನ್ನು ಮಾತ್ರ ಪರಿಗಣಿಸಲಾಗುವುದು.

3)ಭರ್ತಿ ಮಾಡಿದ ಟೆಂಡರಿನ ಎರಡೂ ಲಕೋಟೆಗಳನ್ನು /ಅರ್ಜಿಗಳನ್ನು ದಿನಾಂಕ: 03/01/2011 ಸಾಯಂಕಾಲ 4-00ರೊಳಗಾಗಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಮೌಲ್ಯವರ್ಧಿತ

J.C.C.T. (ADMN)
VAT DIVN. DWD.

ತೆರಿಗೆ ವಿಭಾಗ, 3ನೇ ಅಂತಸ್ತು, ಡಿ.ಸಿ. ಕಂಪೌಂಡ, ಧಾರವಾಡ, ಇವರ ಕಚೇರಿಯಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಯಾವುದೇ ಟೆಂಡರು ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

4) ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನ ಲಕೋಟೆಗಳನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, 3ನೇ ಅಂತಸ್ತು, ಡಿ.ಸಿ. ಕಂಪೌಂಡ, ಧಾರವಾಡ, ಇವರ ಕಚೇರಿಯಲ್ಲಿ ದಿನಾಂಕ: 05/01/2011 ರಂದು ಸಾಯಂಕಾಲ 3.30 ಗಂಟೆಗೆ ಹಾಜರಿದ್ದ ಬಿಡ್ಡುದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಹಾಗೂ ಅರ್ಹತಾಪೂರ್ವ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರುದಾರರ ಫೈನಾನ್ಸಿಯಲ್ ಬಿಡ್‌ಗಳನ್ನು ಪ್ರಸ್ತಾವನಾ ವಿನಂತಿಯ ಪ್ಯಾರಾ–7.3ರಲ್ಲಿ ಸೂಚಿಸಿದ ದಿನಾಂಕದಂದು ತೆರೆಯಲಾಗುವುದು. ಈ ಕುರಿತಂತೆ ಯಾವುದೇ ಬಿಡ್ಡುದಾರರಿಗೆ ವೈಯಕ್ತಿಕವಾಗಿ ಲಿಖಿತವಾಗಿ ಸೂಚನೆಯನ್ನು ನೀಡಲಾಗುವುದಿಲ್ಲ.

**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು(ಆಡಳಿತ)**
**ಮೌಲ್ಯ ವರ್ಧಿತ ತೆರಿಗೆ ವಿಭಾಗ ಧಾರವಾಡ,**
**ಧಾರವಾಡ.**

J.C.
VAT DIVN. DWD.

# ಕರ್ನಾಟಕ ಸರ್ಕಾರ

## ವಾಣಿಜ್ಯ ತೆರಿಗೆ ಇಲಾಖೆ (CTD)

ಧಾರವಾಡ.

## ಪ್ರಸ್ತಾವನಾ ವಿನಂತಿ (Request for Proposal)

ವಾಣಿಜ್ಯ ತೆರಿಗೆ ಇಲಾಖೆಯ, ಧಾರವಾಡದ ಡಿ.ಸಿ. ಕಂಪೌಂಡನಲ್ಲಿರುವ
"ತೆರಿಗೆ ಭವನ" ಮತ್ತು ನವನಗರದಲ್ಲಿರುವ
"ವಾಣಿಜ್ಯ ತೆರಿಗೆ ಸಂಕೀರ್ಣ"ಕ್ಕೆ
ಭದ್ರತಾ ಸಿಬ್ಬಂದಿಗಳನ್ನು ಪೂರೈಸುವ ಕುರಿತು.

**ಪ್ರಸ್ತಾವನಾ ವಿನಂತಿಯನ್ನು ಸಲ್ಲಿಸಬೇಕಾದ ವಿಳಾಸ:**

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ)
ಮೌಲ್ಯ ವರ್ಧಿತ ತೆರಿಗೆ ಧಾರವಾಡ ವಿಭಾಗ,
ಡಿ.ಸಿ.ಕಂಪೌಂಡ, ಧಾರವಾಡ.
ದೂರವಾಣಿ ಸಂಖ್ಯೆ : 0836 – 2210173, 2210174
website: http://ctax.kar.nic.in

J.C.C.T. (ADMN)
VAT DIVN. DWD.

## ಪರಿವಿಡಿ

| ಕ್ರಮ ಸಂಖ್ಯೆ. | ವಿವರಗಳು. | ಪುಟಗಳು | |
|---|---|---|---|
| | | ಇಂದ | ವರೆಗೆ. |
| 1 | ಭದ್ರತಾ ಸಿಬ್ಬಂದಿ ಪೂರೈಕೆ. | 1 | 1 |
| 2 | ವಿದ್ಯಾರ್ಹತೆ ಮತ್ತು ಅನುಭವ | 1 | 1 |
| 3 | ಭದ್ರತಾ ಸಿಬ್ಬಂದಿಗಳ ಕಾರ್ಯಚಟುವಟಿಕೆ ಹಾಗೂ ಜವಾಬ್ದಾರಿ. | 1 | 1 |
| 4 | ದಂಡ. | 1 | 1 |
| 5 | ಭದ್ರತಾ ಏಜೆನ್ಸಿಯ ಅರ್ಹತೆಯ ಬಗ್ಗೆ | 2 | 2 |
| 6 | ಬಿಡ್ಡಗಳ ಸಲ್ಲಿಕೆ. | 2 | 3 |
| 7 | ಬಿಡ್ಡುಗಳ ತೆರೆಯುವ ಪ್ರಕ್ರಿಯೆ. | 3 | 4 |
| 8 | ಬಿಡ್ಡುಗಳಲ್ಲಿಯ ಸಹಿ ಕುರಿತು. | 4 | 4 |
| 9 | ಪ್ರಸ್ತಾವನೆಯಲ್ಲಿ ಕರಾರುಗಳನ್ನು ಮತ್ತು ಷರತ್ತುಗಳನ್ನು ತಿದ್ದುಪಡೆ/ರದ್ದು ಪಡಿಸುವ ಕುರಿತು. | 4 | 4 |
| 10 | ಯಶಸ್ವಿ ಬಿಡ್ಡುದಾರನ ಇತರೆ ವಿಶೇಷ ಬಾಧ್ಯಸ್ಥಿಕೆಗಳು | 4 | 5 |
| 11 | ಬೆಲೆಗಳು ಮತ್ತು ತೆರಿಗೆಗಳು. | 5 | 5 |
| 12 | ಬಿಡ್ಡುಗಳ ಅವಧಿ | 5 | 5 |
| 13 | ಎಲ್1 ಬಿಡ್ಡುದಾರರನ್ನು ಗುರುತಿಸಿ ಒಪ್ಪಂದವನ್ನು ಮಾಡಿಕೊಳ್ಳುವ ಕುರಿತು. | 5 | 6 |
| 14 | ಇಲಾಖೆಯು ಬಿಡ್ಡನ್ನು ಅಂಗೀಕರಿಸುವ /ತಿರಸ್ಕರಿಸುವ ಅಧಿಕಾರದ ಕುರಿತು. | 6 | 6 |
| 15 | ಒಪ್ಪಂದ ಕರಾರುಪತ್ರ ಮಾಡಿಕೊಳ್ಳುವ ಕುರಿತು. | 6 | 6 |
| 16 | ಕಾರ್ಯನಿರ್ವಹಣೆ | 6 | 6 |
| 17 | ಒಪ್ಪಂದಗಳನ್ನು ಮುರಿದುಕೊಳ್ಳುವುದು | 6 | 7 |
| 18 | ಗುತ್ತಿಗೆ ಮೊತ್ತವನ್ನು ಪಾವತಿ ಮಾಡುವ ಕರಾರುಗಳು. | 7 | 7 |
| 19 | ವ್ಯಾಜ್ಯಗಳ ಪರಿಹಾರ ಕುರಿತು. | 7 | 8 |

J.C.C.T. (ADMN)
VAT DIVN. DWD.

6



**1) ಭದ್ರತಾ ಸಿಬ್ಬಂದಿ ಪೂರೈಕೆ.**

1.1 ಭದ್ರತಾ ಏಜೇನ್ಸಿಗಳು ಪೂರೈಸಿದ ಭದ್ರತಾ ಸಿಬ್ಬಂದಿಗಳು (Security Guards) ದಿನದ 24 ಗಂಟೆಗಳ ಅವಧಿಗೆ 3 ಶಿಫ್ಟಗಳಲ್ಲಿ ಧಾರವಾಡದ ಡಿ.ಸಿ ಕಂಪೌಂಡಿನಲ್ಲಿರುವ ತೆರಿಗೆ ಭವನ ಮತ್ತು ವಾಣಿಜ್ಯ ತೆರಿಗೆ ಸಂಕೀರ್ಣ, ನವನಗರ ಹುಬ್ಬಳ್ಳಿ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಸಿದ್ಧರಿರಬೇಕು.

2) **ವಿದ್ಯಾರ್ಹತೆ ಮತ್ತು ಅನುಭವ:-**

2.1 ಭದ್ರತಾ ಏಜೇನ್ಸಿಗಳು ನೀವು ಪೂರೈಸಿದ ಭದ್ರತಾ ಸಿಬ್ಬಂದಿಗಳು ಕನಿಷ್ಠ ಓದುವ ಮತ್ತು ಬರೆಯುವ ಜ್ಞಾನವನ್ನು ಹೊಂದಿರಬೇಕು. ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು, (ಆಡಿಟ್-1), ನವನಗರ-ಹುಬ್ಬಳ್ಳಿ., ಇವರು ಕಾಲಕಾಲಕ್ಕೆ ನೀಡುವ ನಿರ್ದೇಶನಗಳನ್ವಯ ವಾಣಜ್ಯ ತೆರಿಗೆ ಸಂಕೀರ್ಣ ನವನಗರದಲ್ಲಿ ಕಾರ್ಯ ನಿರ್ವಹಿಸುವ ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸಬೇಕು. ಎಲ್ಲ ಭದ್ರತಾ ಸಿಬ್ಬಂದಿಗಳು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ಧಾರವಾಡ, ಇವರ ನೇರ ಸುಪರ್ದಿಗೆ ಒಳಪಟ್ಟಿರುತ್ತಾರೆ.

3) **ಭದ್ರತಾ ಸಿಬ್ಬಂದಿಗಳ ಕಾರ್ಯಚಟುವಟಿಕೆ ಹಾಗೂ ಜವಾಬ್ದಾರಿ.**

3.1 ಭದ್ರತಾ ಸಿಬ್ಬಂದಿಗಳು ಇಲಾಖಾ ಕಟ್ಟಡದ ವ್ಯಾಪ್ತಿಯಲ್ಲಿ ಬರುವ ಇಲಾಖಾಕಟ್ಟಡ, ಇಲಾಖಾವಾಹನಗಳನ್ನು, ಕಾವಲು ಕಾಯುವುದು ಹಾಗೂ ವಾಹನ ನಿಲುಗಡೆ ಸ್ಥಳದಲ್ಲಿ ಕಚೇರಿ ಸಿಬ್ಬಂದಿ/ಅಧಿಕಾರಿಗಳು ನಿಲ್ಲಿಸಿದ ವಾಹನಗಳನ್ನು ಸಹ ಕಾಯುವುದು ಹಾಗೂ ಸಂರಕ್ಷಿಸುವುದು.

3.2 ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವ ಸಮಯದಲ್ಲಿ ಕಚೇರಿ ಆವರಣದೊಳಗೆ ಬಂದು ಹೋಗುವ ಸಂದರ್ಶಕರ ಹಾಗೂ ಸಾರ್ವಜನಿಕರ ಬಗ್ಗೆ ತೀವ್ರವಾಗಿ ನಿಗಾವಹಿಸುವುದು ಹಾಗೂ ಯಾವುದೇ ರೀತಿಯಲ್ಲಿ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ/ಅಧಿಕಾರಿಗಳಿಗೆ ಯಾವುದೆ ರೀತಿಯಲ್ಲಿ ಸಾರ್ವಜನಿಕರಿಂದ ತೊಂದರೆಯಾಗದಂತೆ ಮತ್ತು ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳುವುದು.

3.3 ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವ ಸಮಯದಲ್ಲಿ ಕಚೇರಿ ಆವರಣದೊಳಗೆ ಬಂದು ಹೋಗುವ ಸಂದರ್ಶಕರ ಹಾಗೂ ಸಾರ್ವಜನಿಕರ ಹೆಸರುಗಳನ್ನು ಚಲನವಲನ ವಹಿಯಲ್ಲಿ ದಾಖಲಿಸಿ ಅವರಿಂದ ರುಜು ಪಡೆಯುವುದು.

3.4 ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವ ಸಮಯದಲ್ಲಿ ಕಚೇರಿ ಆವರಣದೊಳಗೆ ಬಂದು ಹೋಗುವ ಸರಕುಗಳ ಮಾಹಿತಿಯ ವಹಿಯನ್ನು ನಿರ್ವಹಿಸುವುದು.

4) **ದಂಡ.**

4.1 ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವ ಸಮಯದಲ್ಲಿ ಇಲಾಖಾ ಕಚೇರಿ ಆವರಣದೊಳಗೆ ಯಾವುದೇ ಕಳುವು ಅಥವಾ ಇಲಾಖೆಯ ಕಚೇರಿಯ ಕಟ್ಟಡಕ್ಕೆ ಅಥವಾ ಇಲಾಖೆಯ ಯಾವುದೇ ವಾಹನಗಳಿಗೆ ಕರ್ತವ್ಯದ ನಿರ್ಲಕ್ಷತೆಯಿಂದ ಹಾನಿಯಾದಲ್ಲಿ ಸದರಿ ಹಾನಿಯನ್ನು ಭದ್ರತಾ ಏಜೆನ್ಸಿಗಳೇ ಇಲಾಖೆಗೆ ಭರಿಸಿ ಕೊಡತಕ್ಕದ್ದು.

J.C.C.T. (ADMN)
VAT DIVN. DWD.

**೫) ಭದ್ರತಾ ಏಜೆನ್ಸಿಯ ಅರ್ಹತೆಯ ಬಗ್ಗೆ**

5.1 ಭದ್ರತಾ ಏಜೇನ್ಸಿಗಳು ಕರ್ನಾಟಕದಲ್ಲಿಯೇ ತಮ್ಮ ಕೇಂದ್ರ ಸ್ಥಳವನ್ನು ಹೊಂದಿರಬೇಕು, ಹಾಗೂ ಭದ್ರತಾ ಸಿಬ್ಬಂದಿಗಳನ್ನು ಪೂರೈಸುವಲ್ಲಿ ಕನಿಷ್ಠ 3ವರ್ಷ ಅನುಭವಹೊಂದಿರಬೇಕು, ಅಲ್ಲದೇ ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ/ಸರ್ಕಾರದಿಂದ ಅಂಗೀಕೃತ ಸಂಸ್ಥೆಗಳಿಗೆ (ಕನಿಷ್ಠ 5 ಇಲಾಖೆಗಳಿಗೆ) ಭದ್ರತಾ ಸಿಬ್ಬಂದಿಗಳನ್ನು ಪೂರೈಸಿದ ಬಗ್ಗೆ ಅನುಭವ ಹೊಂದಿರಬೇಕು. ಹಾಗೂ ಸಧ್ಯಕ್ಕೆ ಭದ್ರತಾ ಸಿಬ್ಬಂದಿಗಳನ್ನು ಪೂರೈಸಿದ ಬಗ್ಗೆ ಪ್ರಮಾಣಪತ್ರಗಳನ್ನು ಲಗತ್ತಿಸಬೇಕು.

5.2 ಭದ್ರತಾ ಏಜೇನ್ಸಿಗಳು ಕಾರ್ಮಿಕ ಕಾಯ್ದೆ ಅಡಿ, ಇ.ಎಸ್.ಐ ಕಾಯ್ದೆ ಅಡಿ, ಇ.ಪಿ.ಎಫ್, ಆದಾಯ ತೆರಿಗೆ ಹಾಗೂ ವೃತ್ತಿ ತೆರಿಗೆ ಕಾಯ್ದೆಗಳಡಿ ನೊಂದಣಿಯನ್ನು ಹೊಂದಿರಬೇಕು ಅಲ್ಲದೇ ನೊಂದಣಿ ಹೊಂದಿದ ಬಗ್ಗೆ ದೃಢೀಕರಿಸಿದ ನೊಂದಣಿ ಪ್ರಮಾಣಪತ್ರಗಳನ್ನು ಲಗತ್ತಿಸಿರಬೇಕು.

5.3 ಭದ್ರತಾ ಏಜೇನ್ಸಿಗಳು ತಾವು ಪೂರೈಸುವ ಭದ್ರತಾ ಸಿಬ್ಬಂದಿಗಳಿಗೆ ಕಾರ್ಮಿಕ ಕಾಯ್ದೆ ಅಡಿ ನಿಗದಿಪಡಿಸಿದಂತೆ ಕನಿಷ್ಟ ವೇತನ ಅಥವಾ ಅದಕ್ಕಿಂತಲೂ ಹೆಚ್ಚಿಗೆ ನೀಡಬೇಕು ಮತ್ತು ತಮ್ಮ ಪ್ರತಿ ಭದ್ರತಾ ಸಿಬ್ಬಂದಿಗೆ ಸಂಬಂಧಿಸಿದಂತೆ ಇ.ಎಸ್.ಐ./ ಇ.ಪಿ.ಎಫ್./ವೃತ್ತಿ ತೆರಿಗೆ ಹಾಗೂ ಇನ್ನಿತರೆ ಕಾಯ್ದೆಬದ್ಧವಾದ ವೆಚ್ಚಗಳನ್ನು ಪ್ರತಿ ತಿಂಗಳೂ ಪಾವತಿ ಮಾಡಿದಬಗ್ಗೆ ಚಲನು ಪ್ರತಿಗಳನ್ನು ದೃಢೀಕರಿಸಿ ಬಿಲ್ಲಿನೊಂದಿಗೆ ಕಡ್ಡಾಯವಾಗಿ ಲಗತ್ತಿಸಲು ಬದ್ಧರಿರಬೇಕು.

**6) ಬಿಡ್ಡಗಳ ಸಲ್ಲಿಕೆ.**

6.1 ಬಿಡ್ಡುದಾರರು ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್‌ಗಳನ್ನು ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ತಿಳಿಸಿರುವಂತೆ ತೃಪ್ತಿದಾಯಕವಾಗಿ ನಿಗದಿತ ಅನುಬಂಧ-1&2ರಲ್ಲಿ ಕಾಣಿಸಿರುವಂತೆ ಎಲ್ಲ ಅಂಶಗಳನ್ನು ಭರಣಾ ಮಾಡಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಡಿ.ವಿ.ಓ.3ನೇ ಅಂತಸ್ತು, ಡಿ.ಸಿ. ಕಂಪೌಂಡ, ಧಾರವಾಡ ಇವರ ವಿಳಾಸಕ್ಕೆ ಸಲ್ಲಿಸುವುದು.

ಎ) ಹಾಗೂ ಮೊದಲನೆಯ ಲಕೋಟೆಯಾದ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಲಕೋಟೆಯ ಮೇಲೆ ಭದ್ರತಾ ಸಿಬ್ಬಂದಿಗಳ ಪೂರೈಕೆಗೆ ಸಂಬಂಧಿಸಿದಂತೆ ಎಂದು ದಪ್ಪ ಅಕ್ಷರಗಳಲ್ಲಿ ಬರೆಯುವುದು ಹಾಗೂ ನಿಗದಿತ ಅನುಬಂಧ-1ನ್ನು ಭರ್ತಿಮಾಡಿ ಲಗತ್ತಿಸಿ ಸೀಲು ಮಾಡುವುದು.

ಬಿ) ಅದರಂತೆ ಎರಡನೆಯ ಲಕೋಟೆಯಾದ ಫೈನಾನ್ಸಿಯಲ್ ಬಿಡ್ ಲಕೋಟೆಯಮೇಲೆ ಭದ್ರತಾ ಸಿಬ್ಬಂದಿಗಳ ಪೂರೈಕೆಗಾಗಿ ಎಂದು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ಬರೆಯುವುದು ಹಾಗೂ ನಿಗದಿತ ಅನುಬಂಧ-2ನ್ನು ಭರ್ತಿಮಾಡಿ ಲಗತ್ತಿಸಿ ಸೀಲು ಮಾಡುವುದು.

6.2 ಭದ್ರತಾ ಏಜೆನ್ಸಿಗಳು ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಈ ಎರಡೂ ಬಿಡ್ ಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.

J.C.C.T. (ADMN)
VAT DIVN. DWD.

6.3 ಭದ್ರತಾ ಏಜೆನ್ಸಿಗಳು ಟೆಂಡರಿನ ಮಾದರಿ ನಮೂನೆಗಳನ್ನು (Request for Proposal) ಅಂತರಜಾಲ ಮೂಲಕ ಡೌನಲೋಡ ಮಾಡಿಕೊಂಡು ಎಲ್ಲ ನಮೂನೆಗಳನ್ನು ಪಡೆದು ಸದರಿ ಟೆಂಡರಿನ ಮೊತ್ತ ರೂ. 200-00 ಹಾಗೂ ತೆರಿಗೆ ಶೇ. 13.5ರಂತೆ ಒಟ್ಟು ರೂ. 227-00ಗಳನ್ನು ಭಾರತೀಯ ಸ್ಟೇಟ ಬ್ಯಾಂಕಿನಲ್ಲಿ ಚಲನ ಮೂಲಕ ಭರ್ತಿ ಮಾಡಿ **(ಲೆಕ್ಕ ಶೀರ್ಷಿಕೆ 0040-00-102-0-06)**

ಚಲನಿನ ಮೂಲ ಪ್ರತಿಯನ್ನು ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನೊಂದಿಗೆ ಲಗತ್ತಿಸುವುದು. ಹಾಗೂ ಸದರಿ ಮೊತ್ತವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

6.4. ಸೀಲು ಮಾಡಿದ ಲಕೋಟೆಗಳಾದ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಹಾಗೂ ಫೈನಾನ್ಸಿಯಲ್ ಬಿಡ್ ಗಳನ್ನು ದೊಡ್ಡದಾದ ಇನ್ನೊಂದು ಲಕೋಟೆಯಲ್ಲಿ ಹಾಕಿ ಸೀಲು ಮಾಡಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, ಆಡಳಿತ, ಡಿ.ವಿ.ಓ. 3ನೇ ಅಂತಸ್ತು, ಡಿ.ಸಿ. ಕಂಪೌಂಡ, ಧಾರವಾಡ (ದೂರವಾಣಿ ಸಂ: 0836-2210173) ಇಲ್ಲಿಗೆ **ದಿನಾಂಕ: 03/01/2011** ರಂದು ಸಂಜೆ 4.00 ರೊಳಗಾಗಿ ಸಲ್ಲಿಸುವುದು. ಹಾಗೂ ಸದರಿ ಟೆಂಡರುಗಳನ್ನು ದಿನಾಂಕ: 05/01/2011ರಂದು ಸಂಜೆ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕೊಠಡಿಯೊಳಗೆ ತೆರೆಯಲಾಗುವುದು.

6.5 ಯಾವುದೇ ಬಿಡ್‌ಗಳನ್ನು ನಿಗದಿ ಪಡಿಸಿದ ದಿನಾಂಕ ಹಾಗೂ ಸಮಯದೊಳಗೆ ಸ್ವೀಕರಿಸಿರದಿದ್ದರೆ ಅಂತಹ ಬಿಡ್ಡುಗಳನ್ನು ತಿರಸ್ಕರಿಸಲಾಗುವುದು. ಒಂದು ವೇಳೆ ಬಿಡ್ಡುಗಳನ್ನು ತೆರೆಯುವಂತಹ ದಿನಾಂಕವು ಸರ್ಕಾರಿ ರಜೆ ದಿನವಾದ ಪಕ್ಷದಲ್ಲಿ ಮರುದಿನವೇ ಅಂದರೆ ಕಚೇರಿಯ ಕಾರ್ಯನಿರ್ವಹಿಸುವ ದಿನದಂದು ಈ ಹಿಂದೆ ನಿಗದಿಪಡಿಸಿದ ಸಮಯಕ್ಕೆ ತೆರೆಯಲಾಗುವುದು.

6.6 ಬಿಡ್ಡುಗಳನ್ನು ಸಲ್ಲಿಸುವುದಕ್ಕಾಗಿ ಬಿಡ್ಡುದಾರರು ವ್ಯಯಿಸಿದಂತಹ ವೆಚ್ಚಕ್ಕೆ ಈ ಇಲಾಖೆಯು (ಟೆಂಡರ ಕರೆದಂತಹ ಕಚೇರಿಯಾಗಲಿ ಅಥವಾ ಇಲಾಖೆಯಾಗಲಿ) ಯಾವುದೇ ರೀತಿಯಿಂದ ಜವಾಬ್ದಾರರಾಗುವುದಿಲ್ಲ.

**7) ಬಿಡ್ಡುಗಳ ತೆರೆಯುವ ಪ್ರಕ್ರಿಯೆ.**

7.1 ವಾಣಿಜ್ಯ ತೆರಿಗೆ ಇಲಾಖೆಯು ಎರಡು ಹಂತದಲ್ಲಿ ಬಿಡ್ ತೆರೆಯುವ ಪ್ರಕ್ರಿಯೆಯನ್ನು ನಡೆಸುವುದು. ಅವುಗಳು ಈ ಕೆಳಗಿನಂತಿವೆ:

1) ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ತೆರೆಯುವುದು ಮತ್ತು ಪರಿಶೀಲಿಸಿ ಮೌಲ್ಯೀಕರಿಸುವುದು.

2) ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ಅರ್ಹರಾದ ಟೆಂಡರದಾರರ ಫೈನಾನ್ಸಿಯಲ್ ಬಿಡ್ ತೆರೆಯುವುದು ಮತ್ತು ಪರಿಶೀಲಿಸಿ ಮೌಲ್ಯೀಕರಿಸುವುದು.

7.2 ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನ್ನು ಪ್ಯಾರಾ 6.4 ರಲ್ಲಿ ತಿಳಿಸಿದ ಸ್ಥಳ ಹಾಗೂ ಸಮಯದಲ್ಲಿ ಹಾಜರಿರುವ ಟೆಂಡರದಾರರ ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು ಮತ್ತು ಅವರ ಹಾಜರಾತಿಯನ್ನು ಪಡೆಯಲಾಗುವುದು, ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನ್ನು ತೆರೆದ ನಡಾವಳಿಯ ಮೇಲೆ ಹಾಜರಾದ ಟೆಂಡರದಾರರ ಅಥವಾ ಅವರ ಪ್ರತಿನಿಧಿಗಳ ಸಹಿಯನ್ನು ಪಡೆಯಲಾಗುವುದು ಸದರಿ ಪ್ರಕ್ರಿಯೆಯಲ್ಲಿ ಈ ಪ್ರಸ್ತಾವನಾ ವಿನಂತಿಯಲ್ಲಿ

J.C.C.T. (ADMN)
VAT DIVN. DWD.

(Request for Proposal) ವಿಧಿಸಿರುವ ಶರತ್ತುಗಳನ್ನು ಪೂರೈಸದ ಟೆಂಡರದಾರರನ್ನು ಟೆಂಡರ ಪ್ರಕ್ರಿಯೆಯಿಂದ ಕಡಿತಗೊಳಿಸಲಾಗುವುದು. ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ಅರ್ಹರಾದ ಬಿಡ್‌ದಾರರ ಫೈನಾನ್ಸಿಯಲ್ ಬಿಡ್ ಲಕೋಟೆಯನ್ನು ನಂತರ ತೆರೆಯಲಾಗುವುದು ಹಾಗೂ ಎಲ್–೧ ಬಿಡ್ಡದಾರರನ್ನು ಪ್ಯಾರಾ - ೧೩.೧ರಲ್ಲಿ ತಿಳಿಸಿರುವಂತೆ ಪರಿಗಣಿಸಲಾಗುವುದು.

೭.೩ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ಗಳನ್ನು ಪರಿಶೀಲಿಸಿದ ನಂತರ, ಸದರಿ ಬಿಡ್‌ನಲ್ಲಿ ಪ್ರಸ್ತಾವನಾ ವಿನಂತಿಯಲ್ಲಿಯ ಶರತ್ತುಗಳನ್ನು ಪೂರೈಸಿದ (ಅರ್ಹ ಬಿಡ್‌ರಗಳ) ಫೈನಾನ್ಸಿಯಲ್ ಬಿಡ್‌ಗಳನ್ನು ಮಾತ್ರ ತೆರೆಯಲಾಗುವದು ಫೈನಾನ್ಸಿಯಲ್ ಬಿಡ್‌ನ್ನು ತೆರೆಯುವ ಸಮಯವನ್ನು ಟೆಕ್ನಿಕಲ್ ಬಿಡ್‌ನ್ನು ತೆರೆಯುವ ಸಮಯದಲ್ಲಿ ಹಾಜರಿರುವ ಬಿಡ್‌ರಗಳಿಗೆ ಅಥವಾ ಅವರ ಪ್ರತಿನಿಧಿಗಳಿಗೆ ಮೌಖಿಕವಾಗಿ ತಿಳಿಸಲಾಗುವುದು.

**೮) ಬಿಡ್ಡುಗಳಲ್ಲಿಯ ಸಹಿ ಕುರಿತು.**

೮.೧ ಮೂಲ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್‌ಗಳನ್ನು ಬೆರಳಚ್ಚು ಮಾಡಿಯೇ ಸಲ್ಲಿಸತಕ್ಕದ್ದು (ಅಥವಾ ಕಂಪ್ಯೂಟರ ಪ್ರಿಂಟ ಮೂಲಕ). ಈ ಬಿಡ್‌ಗಳ ಮೇಲೆ ಟೆಂಡರದಾರ ಅಥವಾ ಟೆಂಡರದಾರರು ಸಮ್ಮತಿಸಿದ ಪ್ರತಿನಿಧಿಗಳು ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ವಿಧಿಸಿರುವ ಶರತ್ತುಗಳಿಗೆ ಬದ್ಧರಾಗಬೇಕಾದರೆ ಪ್ರಸ್ತಾವನೆಯ ಎಲ್ಲ ಪುಟಗಳ ಮೇಲೆ ಸಹಿ ಮಾಡಿರಬೇಕು.

**೯) ಪ್ರಸ್ತಾವನೆಯಲ್ಲಿ ಕರಾರುಗಳನ್ನು ಷರತ್ತುಗಳನ್ನು ತಿದ್ದುಪಡಿ/ರದ್ದು ಪಡಿಸುವ ಕುರಿತು.**

೯.೧ ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ವಿಧಿಸಿರುವ ಶರತ್ತುಗಳನ್ನು ಯಾವುದೇ ಸಮಯದಲ್ಲಿ ಬದಲಾವಣೆ/ಮಾರ್ಪಾಡು ಮಾಡುವ ಅಥವಾ ರದ್ದು ಪಡಿಸುವ ಹಕ್ಕನ್ನು ವಾಣಿಜ್ಯ ತೆರಿಗೆ ಇಲಾಖೆಯು ಹೊಂದಿರುತ್ತದೆ. ಒಂದು ವೇಳೆ ಪ್ರಸ್ತಾವನೆಯನ್ನು ಸ್ವೀಕರಿಸಿ ಟೆಂಡರ ತೆರೆಯುವ ದಿನಾಂಕದ ಬದಲಾವಣೆ ಮಾಡುವ ಪರಿಸ್ಥಿತಿ ಬಂದಲ್ಲಿ ಅಂತಹ ವಿಷಯವನ್ನು ಈ ಕಚೇರಿಯ ನೋಟೀಸ ಬೋರ್ಡಿನಲ್ಲಿ ಬದಲಾವಣೆ ಮಾಡಿದ ದಿನಾಂಕವನ್ನು ಪ್ರಕಟಿಸಲಾಗುವುದು.

**೧೦) ಯಶಸ್ವಿ ಬಿಡುದಾರನ ಇತರೆ ವಿಶೇಷ ಬಾಧ್ಯಸ್ಥಿಕೆಗಳು:**

ವಾಣಿಜ್ಯ ತೆರಿಗೆ ಇಲಾಖೆಯು ಕಾಲ ಕಾಲಕ್ಕೆ ಅವಶ್ಯವಿರುವ ಕೆಲವು ಸಾಮಾನ್ಯ ಶರತ್ತುಗಳನ್ನು ಸೇರಿಸುವ; ಕಡಿತಗೊಳಿಸುವ, ತಿದ್ದುಪಡಿ/ಮಾರ್ಪಾಡು ಮಾಡುವ ಹಕ್ಕನ್ನು ಈ ಮೂಲಕ ಕಾಯ್ದಿರಿಸಿರುತ್ತದೆ.

10.1 ವಾಣಿಜ್ಯ ತೆರಿಗೆ ಇಲಾಖೆಯ ನಿರೀಕ್ಷೆಯಂತೆ ಯಶಸ್ವಿ ಬಿಡ್ಡುದಾರನು ವಿಧಿಸಿರುವ ಎಲ್ಲ ಕರಾರುಗಳನ್ನು, ತಾವು ನಿರ್ವಹಿಬೇಕಾದ ಚಟುವಟುಕೆಗಳನ್ನು ಕಾಳಜಿಯಿಂದ ಚಾಚೂ ತಪ್ಪದೆ ಜವಾಬ್ದಾರಿಯುತವಾಗಿ ನಿರ್ವಹಿಸುವುದು.

10.2 ವಾಣಿಜ್ಯ ತೆರಿಗೆ ಇಲಾಖೆಯು ವಿಧಿಸಿರುವ ಶರತ್ತಿನಂತೆ ತಮ್ಮ ಅಧಿಕಾರವ್ಯಾಪ್ತಿಯಲ್ಲಿ, ಇಲಾಖಾ ಸಿಬ್ಬಂದಿಗಳೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿ ಅವರ ಸಹಕಾರದೊಂದಿಗೆ ಕಾರ್ಯ ನಿರ್ವಹಿಸುವುದು.

10.3 ಯಶಸ್ವಿ ಬಿಡ್‌ದಾರನ್ನು ತಾನು ಒದಗಿಸಿದ ಸಿಬ್ಬಂದಿಯ ಅಥವಾ ತನ್ನ ಕಾರ್ಯ್ಯವನ್ನು ನಿರ್ವಹಿಸಲು ನೀಡಿದ ಇತರೆ ವ್ಯಕ್ತಿಯು (sub contractor) ಕಾನೂನು ಬಾಹಿರ ಕಾರ್ಯಗಳನ್ನು ನಿರ್ವಹಿಸುವುದು ಕಂಡು ಬಂದಲ್ಲಿ ಅದರಿಂದುಂಟಾಗುವ ನಷ್ಟಗಳಿಗೆ, ಯಶಸ್ವಿ ಬಿಡ್‌ದಾರನೇ ನೇರ ಹೊಣೆಗಾರನಾಗುತ್ತಾನೆ.

10.4 ಈ ಇಲಾಖೆಯಿಂದ ನೀಡುವ ನೋಟೀಸುಗಳನ್ನು ಸ್ವೀಕರಿಸುವ, ಅವುಗಳಿಗೆ ಉತ್ತರಿಸುವ ಕಾರ್ಯಗಳಿಗೆ, ಟೆಂಡರದಾರನ್ನು ಒದಗಿಸಿದ ಭದ್ರತಾ ಸಿಬ್ಬಂದಿಗಳ ಕಾರ್ಯ ನಿರ್ವಹಣೆಗಳನ್ನು ವಿಕ್ಷೀಸಲು ಮತ್ತು ಒಪ್ಪಂದದ ಕರಾರುಗಳ ಸುಗಮ ನಿರ್ವಹಣೆಗೆ ಒಬ್ಬ ನುರಿತ ಪ್ರತಿನಿಧಿಯನ್ನು ನಿಯೋಜಿಸುವುದು. ಹಾಗೂ ನಿಯೋಜಿತ ಪ್ರತಿನಿಧಿಯನ್ನು ಬದಲಾಯಿಸುವ ಪೂರ್ವದಲ್ಲಿ ಕಚೇರಿಯ ಪೂರ್ವ ಅನುಮತಿಯನ್ನು ಪಡೆಯುವುದು ಅವಶ್ಯಕವಾಗಿರುತ್ತದೆ. ಯಶಸ್ವಿ ಬಿಡ್‌ದಾರನು ಒಪ್ಪಂದವು ಸಂಪೂರ್ಣವಾಗಿ ಯಶಸ್ವಿಯಾಗಲು ವೈಯಕ್ತಿಕವಾಗಿ ಜವಾಬ್ದಾರನಾಗಿರುತ್ತಾನೆ.

11) ಬೆಲೆಗಳು ಮತ್ತು ತೆರಿಗೆಗಳು.

11.1 ಗುತ್ತಿಗೆದಾರರು ನಮೂದಿಸಿರುವ ಬೆಲೆಗಳು ಎಲ್ಲ ತೆರಿಗೆಗಳಾದ ಅಂದರೆ, ಉದಾ: ವೃತ್ತಿ ತೆರಿಗೆ, ಆದಾಯ ತೆರಿಗೆ, ವಿಮಾ ಮೊಬಲಗು, ತಾಂತ್ರಿಕ ಸೇವಾ ಶುಲ್ಕ ಇತ್ಯಾದಿಗಳನ್ನು ಒಳಗೊಂಡಿರಬೇಕು ಹಾಗೂ ಸ್ಥಿರ ಮೊಬಲಗು ಆಗಿರಬೇಕು.

11.2 ಅಲ್ಲದೇ ತಾವು ನಮೂದಿಸಿದ ಬೆಲೆಗಳು ಗುತ್ತಿಗೆ ಅವಧಿ ಮುಗಿಯುವವರೆಗೆ ಸ್ಥಿರವಾಗಿರತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಬದಲಾವಣೆಗೆ ಒಳಪಡಕೂಡದು. ಹಾಗೂ ತಾವು ನಮೂದಿಸಿದ ಬೆಲೆಗಳನ್ನು ಮೂಲ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್‌ನಲ್ಲಿ ಯಾವುದೇ ರೀತಿಯಲ್ಲಿ ಕಾಣಿಸಬಾರದು. ಒಂದು ವೇಳೆ ಕಾಣಿಸಿದಲ್ಲಿ ಮೂಲ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.

12) ಬಿಡ್ಡುಗಳ ಅವಧಿ

12.1 ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಎರಡು ಬಿಡ್‌ಗಳ ಅವಧಿಯು ಈ ಕಚೇರಿಯಿಂದ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕದಿಂದ 3 ತಿಂಗಳು ಅವಧಿಯ ವರೆಗೆ ಮಾತ್ರ ಹೊಂದಿರುತ್ತದೆ.

13) ಎಲ್-1 ಬಿಡ್ಡುದಾರರನ್ನು ಗುರುತಿಸಿ ಒಪ್ಪಂದವನ್ನು ಮಾಡಿಕೊಳ್ಳುವ ಕುರಿತು.

13.1 ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಈ ಎರಡು ಬಿಡ್‌ಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಹಾಜರಿದ್ದ ಬಿಡ್ಡುದಾರರ ಸಮ್ಮುಖದಲ್ಲಿ ಟೆಂಡರುಗಳನ್ನು ತೆರೆದು ಅತ್ಯಂತ ಕಡಿಮೆ ಮೊತ್ತ ಸೂಚಿಸಿರುವ ಬಿಡ್ಡುದಾರರನ್ನು ಇಲಾಖೆಯು ಗುರುತಿಸಿ ಸದರಿ

J.C.C.T. (ADMN)
VAT DIVN. DWD.

ಬಿಡ್ಡುದಾರರನ್ನು ಎಲ್-1 ಬಿಡ್ಡುದಾರರೆಂದು ಘೋಷಿಸಲಾಗುವುದು. ಆದ್ದರಿಂದ ಬಿಡ್ಡುದಾರರು ತಾವು ನಮೂದಿಸುವ ಬೆಲೆಗಳು ತಮ್ಮ ಸ್ವಂತ ಇಚ್ಛೆಯಿಂದ ತುಲನಾತ್ಮಕ ದರಗಳನ್ನು ನಮೂದಿಸಬೇಕಲ್ಲದೇ ಯಾವುದೇ ಕಾರಣಕ್ಕೂ ವರ್ಗಾವಣೆ ಮಾಡುವುದಾಗಲೀ, ವ್ಯವಹರಿಸುವುದಾಗಲೀ, ಮುರಿಸುವುದಾಗಲಿ ಮಾಡಲು ಅವಕಾಶವಿರುವುದಿಲ್ಲ. ಹಾಗೂ ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್ ಫೈನಾನ್ಸಿಯಲ್ ಬಿಡ್‌ನಲ್ಲಿ, ತಿಳಿಸಿರುವಂತೆ ಯಾವುದೇ ಕಾರಣಕ್ಕೆ ಒಳಾಂಶಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ ಇಲಾಖೆಯು ಎಲ್-1 ಬಿಡ್ಡುದಾರರೆಂದು ಘೋಷಿಸಿರುವುದನ್ನು ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತದೆ. ಹಾಗೂ ತದನಂತರ ಅತ್ಯಂತ ಕಡಿಮೆ ಮೊತ್ತವನ್ನು ನಮೂದಿಸಿರುವ ಬಿಡ್ಡುದಾರರನ್ನು ಗುರುತಿಸಿ ಎಲ್-2 ಬಿಡ್ಡುದಾರರೆಂದು ಘೋಷಿಸಲಾಗುವುದು. ಹಾಗೂ ಒಂದುವೇಳೆ ಏತನ್ಮಧ್ಯೆ ಕೆಲಸದ ಆದೇಶ ಪಡೆದರೂ ಸಹಿತ ಅದನ್ನು ರದ್ದು ಪಡಿಸುವ ಹಕ್ಕು ಇಲಾಖೆಯು ಹೊಂದಿರುತ್ತದೆ. ಹಾಗೂ ಅಂತಹ ಬಿಡ್ಡುದಾರರನ್ನು ಕಪ್ಪು ಪಟ್ಟಿಗೆ ಸೇರಿಸುವುದರೊಂದಿಗೆ ಇಲಾಖೆಯು ಮುಂದೆ ಹೊರಡಿಸಬಹುದಾದ ಯಾವುದೇ ಟೆಂಡರ ಪ್ರಕ್ರಿಯೆಯಲ್ಲಿ ಎರಡು ವರ್ಷಗಳ ಅವಧಿಗೆ ಅನರ್ಹತೆಯನ್ನು ಹೊಂದಿರುತ್ತಾರೆ.

14) **ಇಲಾಖೆಯು ಬಿಡ್ಡನ್ನು ಅಂಗೀಕರಿಸುವ /ತಿರಸ್ಕರಿಸುವ ಅಧಿಕಾರದ ಕುರಿತು.**

**14.1** ಪ್ರಸ್ತಾವನಾ ವಿನಂತಿಯಲ್ಲಿ (Request for Proposal) ವಿದಿಸಿರುವ ಶರತ್ತುಗಳನ್ನು ಹಾಗೂ ಟೆಂಡರ ಪ್ರಕ್ರಿಯೆ ಪ್ರಾರಂಭದ ಪೂರ್ವದಲ್ಲಿ ಅಥವಾ ನಂತರದಲ್ಲಾಗಲಿ ಟೆಂಡರ ಬಿಡ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆ ಇಲಾಖೆಯು ಹೊಂದಿರುತ್ತದೆ.

15) **ಒಪ್ಪಂದ ಕರಾರುಪತ್ರ ಮಾಡಿಕೊಳ್ಳುವ ಕುರಿತು.**

15.1 ಯಶಸ್ವಿ ಬಿಡ್ಡುದಾರರು ತಮಗೆ ಲಿಖಿತ ಆದೇಶ ತಲುಪಿದ ದಿನಾಂಕದಿಂದ 10 ದಿನಗಳ ಒಳಗಾಗಿ ಈ ಕಚೇರಿಗೆ ಹಾಜರಾಗಿ ಕರಾರು ಒಪ್ಪಂದ ಪತ್ರವನ್ನು ಮಾಡಿಕೊಳ್ಳತಕ್ಕದ್ದು.

16) **ಕಾರ್ಯನಿರ್ವಹಣೆ.**

16.1 ಸದರ ಒಪ್ಪಂದದ ಅವಧಿಯಲ್ಲಿ ಯಶಸ್ವಿ ಬಿಡ್ಡುದಾರರು ಭಾಗಶ:ವಾಗಲಿ ಅಥವಾ ತಮ್ಮ ಪರವಾಗಿ ಇನ್ನಿತರಿಗೆ ಸದರಿ ಕಾರ್ಯವನ್ನು ವಹಿಸಿಕೊಡುವುದಾಗಲಿ ಮಾಡಬಾರದು. ಒಂದು ವೇಳೆ ಅನಿವಾರ್ಯ ಸಂದರ್ಭಗಳಲ್ಲಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರಿಂದ ಲಿಖಿತ ಅನುಮತಿ ಪಡೆಯತಕ್ಕದ್ದು.

17) **ಒಪ್ಪಂದಗಳನ್ನು ಮುರಿದುಕೊಳ್ಳುವುದು.**

17.1 ಗುತ್ತಿಗೆದಾರನು (ಯಶಸ್ವಿ ಬಿಡ್ಡದಾರನು) ಒಪ್ಪಂದದ ಕರಾರುಗಳನ್ನು ಉಲ್ಲಂಘಿಸಿದಲ್ಲಿ/ಅಥವಾ ದಿವಾಳಿಯಾದಲ್ಲಿ ಇಲಾಖೆಯು ಅವರಿಗೆ ಸೂಚನಾ ಪತ್ರವನ್ನು ನೀಡುವುದರೊಂದಿಗೆ ಒಪ್ಪಂದವನ್ನು ಸಂಪೂರ್ಣವಾಗಿಯಾಗಲೀ ಅಥವಾ ಭಾಗಶ:ವಾಗಲಿ ಮುರಿದುಕೊಳ್ಳಬಹುದಾಗಿರುತ್ತದೆ. ಹಾಗೂ ಗುತ್ತಿಗೆದಾರನಿಗೆ ಕೆಲಸದ ಆದೇಶ ತಲುಪಿದ ದಿನದಿಂದ ನಿಗದಿಪಡಿಸಿದ ಅವಧಿಯೊಳಗೆ ಭದ್ರತಾ

J.C.C.T. (ADMN)
VAT DIVN. DWD.

12



ಸಿಬ್ಬಂದಿಗಳನ್ನು ಕಡ್ಡಾಯವಾಗಿ ನೇಮಿಸಬೇಕು. ಒಂದು ವೇಳೆ ಭದ್ರತಾ ಸಿಬ್ಬಂದಿಗಳನ್ನು ನೇಮಿಸದೇ ಇದ್ದಲ್ಲಿ ಯಾವುದೇ ಕಾರಣಕ್ಕೂ ಹೆಚ್ಚುವರಿ ಅವಧಿಯನ್ನು ನೀಡಲಾಗುವುದಿಲ್ಲ.

ಗುತ್ತಿಗೆದಾರನು ಒಂದುವೇಳೆ ಕರಾರು ಒಪ್ಪಂದ ಪತ್ರದ ಪ್ರಕಾರ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಇಲಾಖೆಯು ಮುಂದಿನ ಅವಧಿಗೆ ಬೇರೆ ಇನ್ನೊಬ್ಬ ಗುತ್ತಿಗೆದಾರನಿಂದ ಸೇವೆಯನ್ನು ಪಡೆಯುವ ಹಕ್ಕನ್ನು ಹೊಂದಿರುತ್ತದೆ. ಅಲ್ಲದೇ ಸೇವೆ ನೀಡಿದ ಅವಧಿಗೆ ಮಾತ್ರ ಗುತ್ತಿಗೆದಾರನು ತನ್ನ ಹಕ್ಕನ್ನು ಹೊಂದಿದ್ದು, ತದನಂತರದ ಅವಧಿಗೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ.

**18) ಗುತ್ತಿಗೆ ಮೊತ್ತವನ್ನು ಪಾವತಿ ಮಾಡುವ ಕರಾರುಗಳು.**

18.1 ಗುತ್ತಿಗೆದಾರನು ತಾನು ಪೂರೈಸಿದ ಭದ್ರತಾ ಸಿಬ್ಬಂದಿಗಳ ಸೇವೆಗೆ ಪ್ರತಿ ತಿಂಗಳು ಗುತ್ತಿಗೆ ಮೊತ್ತವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು,

ಎ) ಪ್ರತಿ ತಿಂಗಳ ಅಂತ್ಯಕ್ಕೆ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ಮೌಲ್ಯ ವರ್ಧಿತ ತೆರಿಗೆ ಧಾರವಾಡ ವಿಭಾಗ, ಧಾರವಾಡ ಇವರ ಕಚೇರಿಗೆ ತನ್ನ ಬಿಲ್ಲನ್ನು ಸಲ್ಲಿಸತಕ್ಕದ್ದು.

ಬಿ) ಬಿಲ್ಲು ಸಲ್ಲಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಗೊತ್ತುಪಡಿಸಿದ ಗುತ್ತಿಗೆ ಮೊತ್ತವನ್ನು ಸಂದಾಯಮಾಡಲಾಗುವುದು.

**19) ವ್ಯಾಜ್ಯಗಳ ಪರಿಹಾರ ಕುರಿತು.**

**19.1** ಒಂದುವೇಳೆ ಇಲಾಖೆ ಹಾಗೂ ಗುತ್ತಿಗೆದಾರರ ಮಧ್ಯ ಗುತ್ತಿಗೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಾಗೂ ಕರಾರು ಒಪ್ಪಂದ ಪತ್ರದ ಒಳಾಂಶಗಳಿಗೆ ಸಂಬಂಧಿಸಿದಂತೆ ವ್ಯಾಜ್ಯಗಳು/ವಿವಾದಗಳು ಉದ್ಭವಿಸಿದಲ್ಲಿ ಅವುಗಳನ್ನು ಯಾವುದೇ ದುರದ್ದೇಶವಿಲ್ಲದೇ ಒಟ್ಟಾಭಿಪ್ರಾಯದಲ್ಲಿ ಇಲಾಖೆಯು ನಿಗದಿಪಡಿಸಿದ ಚೌಕಟ್ಟಿನೊಳಗೆ ಮಾತುಕತೆ ಮೂಲಕವಾಗಲೀ ಅಥವಾ ಇನ್ನಾವುದೇ ಯೋಗ್ಯವೆನಿಸಿದ ಪರಿಹಾರದ ಮೂಲಕವಾಗಲಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಲಾಗುವುದು. ಆದಾಗ್ಯೂ ಸಹಿತ ಸದರ ವ್ಯಾಜ್ಯಗಳು ಪರಿಹರಿಸಲು ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಗುತ್ತಿಗೆದಾರರ ಪರವಾಗಿ ಹಾಗೂ ಇಲಾಖೆಯ ಪರವಾಗಿ ಮಧ್ಯಸ್ಥ ಪ್ರಾಧಿಕಾರವನ್ನು ರಚಿಸಿ, ಅದರಲ್ಲಿ ಗುತ್ತಿಗೆದಾರರ ಪರವಾಗಿ ಒಬ್ಬ ಮಧ್ಯಸ್ಥಗಾರನನ್ನು ಹಾಗೂ ಇಲಾಖೆಯ ಪರವಾಗಿ ಒಬ್ಬ ಮಧ್ಯಸ್ಥಗಾರನನ್ನು ಸೂಚಿಸಲಾಗುವುದು ಹಾಗೂ ಮೇಲ್ಕಾಣಿಸಿದ ಇಬ್ಬರೂ ಮಧ್ಯಸ್ಥರು ಸೇರಿ, ಇನ್ನೊಬ್ಬ ಮೂರನೇ ಮಧ್ಯಸ್ತಗಾರರನ್ನು ಸೂಚಿಸಿ ಮಧ್ಯಸ್ಥ ಪ್ರಾಧಿಕಾರವು ನೀಡುವ ಮಧ್ಯಸ್ಥ ಐತೀರ್ಪಿಗೆ ಒಳಪಟ್ಟು ಮಧ್ಯಸ್ಥ ಒಪ್ಪಂದವನ್ನು ಮಾಡಿಕೊಂಡು ವ್ಯಾಜ್ಯಗಳನ್ನು ಪರಿಹರಿಸಲು ಪ್ರಯತ್ನಿಸಲಾಗುವುದು. ಇಷ್ಟೆಲ್ಲ ಪ್ರಯತ್ನಿಸಲಾಗಿ ವ್ಯಾಜ್ಯಗಳನ್ನು ಪರಿಹರಿಸಲು ಸಾಧ್ಯವಾಗದೇ ಇದ್ದಲ್ಲಿ ಮಧ್ಯಸ್ಥಿಕೆ ಅಧಿನಿಯಮ-1996ರ ಪ್ರಕಾರ ಮಧ್ಯಸ್ಥ ಐತೀರ್ಪಿನ ಪ್ರಕಾರ ಮಧ್ಯಸ್ಥ ಪ್ರಾಧಿಕಾರವು ಸೂಚಿಸಿದಂತೆ ಮಧ್ಯಸ್ಥಿಕೆ ಖಂಡಗಳನ್ವಯ ಯಾವುದೇ ಸಮಯದಲ್ಲಿ,

J.C.C.T. (ADMN)
VAT DIVN. DWD.

ಯಾವುದೇ ರೂಪದಲ್ಲಿ ಅವರು ಸೂಚಿಸುವ ಖಂಡಗಳನ್ವಯ ತಗುಲಿದ ಅನುಷಂಗಿಕ/ಪ್ರಾಸಂಗಿಕ ವೆಚ್ಚಗಳನ್ನು ಸಮನಾಗಿ ಭರಿಸುವುದರೊಂದಿಗೆ ವ್ಯಾಜ್ಯಗಳನ್ನು/ವಿವಾದಗಳನ್ನು ಪರಿಹರಿಸಲು ಪ್ರಯತ್ನಿಸಲಾಗುವುದು.

ಆದಾಗ್ಯೂ ಸಹಿತ ವಿವಾದವು/ವ್ಯಾಜ್ಯಗಳು ಪರಿಹಾರವಾಗದೇ ಹಾಗೇ ಉಳಿದುಕೊಂಡಲ್ಲಿ ತತ್ಪರಿಣಾಮವಾದ ಪರಿಹಾರವನ್ನು ಪಡೆದುಕೊಳ್ಳಲು ಅಂತಿಮವಾಗಿ ಸಿವಿಲ್ ನ್ಯಾಯಾಲಯ, ಧಾರವಾಡ, ಇವರು ನೀಡುವ ಆದೇಶಕ್ಕೆ ಒಳಪಟ್ಟು ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳುವುದಾಗಿರುತ್ತದೆ.

J.C.C.T. (ADMN)
VAT DIVN. DWD.

## ಟೆಕ್ನಿಕಲ್/ಅರ್ಹತಾ ಪೂರ್ವ ಬಿಡ್

### ಅನುಬಂಧ-1

1) ಈ ಅಧ್ಯಾಯದಲ್ಲಿ ಕಾಣಿಸಿದಂತೆ ಈ ಕೆಳಕಂಡ ಟೇಬಲ್‌ದಲ್ಲಿ ಕಾಣಿಸಿದ ಅಂಶಗಳು ಟೆಂಡರಗೆ ಸಂಬಂಧಿಸಿದಂತೆ ಪೂರಕ ಅಂಶಗಳಾಗಿರುತ್ತವೆ. ಆದ್ದರಿಂದ ಎಲ್ಲ ಗುತ್ತಿಗೆದಾರರು ಈ ಕೆಳಕಂಡ ನಮೂನೆಯಲ್ಲಿ ಕಾಣಿಸಿದ ಎಲ್ಲ ಕಾಲಂಗಳನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು. ತಪ್ಪಿದಲ್ಲಿ ಟೆಂಡರುಗಳ ಪ್ರಾಥಮಿಕ ಪರಿಶೀಲನಾ ಸಮಯದಲ್ಲಿ ಟೆಂಡರಗೆ ಪೂರಕವಾದ ಅಂಶಗಳು ಇಲ್ಲವೆಂದು ಪರಿಗಣಿಸಿ ತಿರಸ್ಕರಿಸಲಾಗುವುದು.

2) ಬಿಡ್ಡುದಾರರು ಈ ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದಾಗಿರುತ್ತದೆ.

ಎ) ಬಿಡ್ಡುದಾರರು ಕಳೆದ 3 ವರ್ಷಗಳಿಂದ ಕರ್ನಾಟಕದಲ್ಲಿ ಭದ್ರತಾ ಸಿಬ್ಬಂದಿಗಳನ್ನು ಪೂರೈಸಿದ ಬಗ್ಗೆ ಮಾಹಿತಿಯ ದಾಖಲೆ ಸಲ್ಲಿಸುವುದು.

ಬಿ) ಬಿಡ್ಡುದಾರರು ತಮ್ಮ ಕೇಂದ್ರಕಚೇರಿಯನ್ನು ಕರ್ನಾಟಕದಲ್ಲಿ ಹೊಂದಿರುವ ಬಗ್ಗೆ ದಾಖಲೆ ಸಲ್ಲಿಸುವುದು.

ಸಿ) ಬಿಡ್ಡುದಾರರು ಕಳೆದ 3 ವರ್ಷಗಳಲ್ಲಿ ರಾಜ್ಯ/ಕೇಂದ್ರ ಸರ್ಕಾರದ/ಅಂಗೀಕೃತ/ಮಾನ್ಯತೆ ಪಡೆದ ಇಲಾಖೆ/ಸಂಸ್ಥೆಗಳಿಗೆ ಭದ್ರತಾ ಸಿಬ್ಬಂದಿಗಳನ್ನು ಪೂರೈಸಲಾಗಿದೆ ಎಂಬುದರ ಬಗ್ಗೆ ದಾಖಲೆ ಸಲ್ಲಿಸುವುದು. ಹಾಗೂ ಚಾಲ್ತಿ ಆರ್ಥಿಕ ವರ್ಷದಲ್ಲಿ ಯಾವ ಯಾವ ಇಲಾಖೆ/ಸಂಸ್ಥೆಗಳಿಗೆ ಭದ್ರತಾ ಸಿಬ್ಬಂದಿಗಳನ್ನು ಪೂರೈಸಲಾಗಿದೆ ಎಂಬುದರ ಬಗ್ಗೆ ದಾಖಲೆ ಮತ್ತು ಕೆಲಸದ ಆದೇಶ ಪಡೆದ ಬಗ್ಗೆ ದಾಖಲೆ ಸಲ್ಲಿಸುವುದು.

J.C.C.T. (ADMN)
VAT DIVN. DWD.

15



## ನಮೂನೆ

**ಬಿಡ್ಡುದಾರರು ಈ ಕೆಳಕಂಡ ಸಾಮಾನ್ಯ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು:-**

| ಕ್ರ.ಸಂ. | | ವಿವರಗಳು. | |
|---|---|---|---|
| 1 | | ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ | |
| 2 | | ಗುತ್ತಿಗೆದಾರರು ವೈಯಕ್ತಿಕ ಸಂಸ್ಥೆಯಾದಲ್ಲಿ ಮಾಲೀಕರ ಹೆಸರು/ಪಾಲುದಾರಿ ಸಂಸ್ಥೆಯಾಗಿದ್ದಲ್ಲಿ ಪಾಲುದಾರರ ಹೆಸರುಗಳು/ಕಂಪನಿ-ಸಂಸ್ಥೆಯಾಗಿದ್ದಲ್ಲಿ | |
| | 1 | ಪ್ರೆಸಿಡೆಂಟ/ಕಾರ್ಯನಿರ್ವಾಹಕ ನಿರ್ದೇಶಕರ ಹೆಸರು. | |
| | 2 | ದೂರವಾಣಿ ಸಂಖ್ಯೆ: | |
| | 3 | ಫ್ಯಾಕ್ಸ ಸಂಖ್ಯೆ | |
| | 4 | ಈ-ಮೇಲ್ ಐ.ಡಿ. | |
| 3 | | ವ್ಯವಹಾರದ ಸ್ವರೂಪ | |
| | 1) | ಕಂಪನಿ (ಕಂಪನಿಯಾಗಿದ್ದಲ್ಲಿ ನೊಂದಣಿ ಸಂಖ್ಯೆ) | |
| | 2) | ಸಾರ್ವಜನಿಕ ಕಂಪನಿ. | |
| | 3) | ಪಾಲುದಾರಿಕೆ ಸಂಸ್ಥೆ. | |
| | 4) | ಮಾಲೀಕತ್ವ. | |
| 4 | | ವ್ಯವಹಾರ ಪ್ರಾರಂಭಿಸಿದ ದಿನಾಂಕ. | |
| 5 | | ಪಾಲುದಾರಿಕೆ ಸಂಸ್ಥಯಾಗಿದ್ದಲ್ಲಿ<br>ಎಲ್ಲ ಪಾಲುದಾರರ/ಕಂಪನಿಯಾಗಿದ್ದಲ್ಲಿ ಎಲ್ಲ ನಿರ್ದೇಶಕರ<br>ಹೆಸರು<br>ದೂರವಾಣಿ ನಂ: | |

J.C.C.T. (ADMN)
VAT DIVN. DWD.

| | | |
|---|---|---|
| | ಸೆಲ್ ನಂ:<br><br>ಈ-ಮೇಲ ಐ.ಡಿ. | |
| 6 | ಈ.ಎಮ್.ಡಿ. ಮೊತ್ತವನ್ನು (ರೂ. 10000/-) ಡಿ.ಡಿ.ಮುಖಾಂತರ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಆಡಳಿತ), ಡಿ.ವಿ.ಓ. ಧಾರವಾಡ ಹೆಸರಿನಲ್ಲಿ ನೀಡಬೇಕು.<br><br>ಬ್ಯಾಂಕಿನ ಹೆಸರು/ಡಿ.ಡಿ.ನಂಬರು ಮತ್ತು ದಿನಾಂಕ: | ರೂ. |
| 7 | ಬಿಡರದಾರನ ಪ್ರತಿನಿಧಿಯ ವಿವರ:<br><br>ಹೆಸರು & ವಿಳಾಸ:<br><br>ದೂರವಾಣಿ & ಮೊಬೈಲ್ ಸಂಖ್ಯೆ:<br><br>ಇಮೇಲ್ ಐ.ಡಿ: | |
| 8 | ಭದ್ರತಾ ಸಿಬ್ಬಂದಿಗಳ ಪೂರೈಕೆಯ ಅನುಭವದ ವಿವರ ಕುರಿತು ಮಾಹಿತಿ / ಸರಕಾರಿ ಕಚೇರಿಗಳಿಗೆ ಪೂರೈಕೆ ಮಾಡಿದ ಮಾಹಿತಿ / ಸಾರ್ವಜನಿಕ ಸಂಸ್ಥೆಗಳಿಗೆ ಪೂರೈಕೆ ಮಾಡಿದ ವಿವರ.<br><br>ಪೂರೈಕೆ ಮಾಡಿದ ಕಚೇರಿಗಳ ವಿಳಾಸ:<br><br>ದೂರವಾಣಿ ಸಂಖ್ಯೆ: | |

ಸ್ಥಳ:

ದಿನಾಂಕ:

ಅಧಿಕೃತ ಪ್ರತಿನಿಧಿಯ ಸಹಿ

ಹೆಸರು:

ಪದನಾಮ:

ಮೊಹರು:

ಮತ್ಯಾವುದಾದರು ಅನುಬಂಧಗಳು ಇದ್ದಲ್ಲಿ.

J.C.C.T. (ADMN)
VAT DIVN. DWD.

## ಅನುಬಂಧ – 2

## ಫೈನಾನ್ಸಿಯಲ್ ಬಿಡ್.

| | | |
|---|---|---|
| 01 | ಸಂಸ್ಥೆಯ ಹೆಸರು. | |
| 02 | ಸಂಸ್ಥೆ ವಿಳಾಸ. | |
| 03 | ದೂರವಾಣಿ ಸಂಖ್ಯೆ | |
| 04 | ಫ್ಯಾಕ ಸಂಖ್ಯೆ | |
| 05 | ನೋಂದಣಿ ಸಂಖ್ಯೆ | |

**ಧಾರವಾಡದ ತೆರಿಗೆ ಭವನಕ್ಕೆ ಮತ್ತು ನವನಗರದ ವಾಣಿಜ್ಯ ತೆರಿಗೆ ಸಂಕೀರ್ಣಕ್ಕೆ ಭದ್ರತಾ ಸಿಬ್ಬಂದಿ ಕುರಿತ ಫೈನಾನ್ಸಿಯಲ್ ಬಿಡ್**

| ಕ್ರ. ಸಂ | ವಿವರ | ಶುಲ್ಕ (ಎಲ್ಲ ರೀತಿಯ ತೆರಿಗೆ ಹಾಗೂ ಶುಲ್ಕಗಳನ್ನು ಒಳಗೊಂಡಿರುತ್ತದೆ.) |
|---|---|---|
| 6 | ಪ್ರತಿಯೊಬ್ಬ ಭದ್ರತಾ ಸಿಬ್ಬಂದಿಗೆ ವಿಧಿಸ ಬಹುದಾದ ಶುಲ್ಕ | ಪ್ರತಿ ತಿಂಗಳಿಗೆ/ಪ್ರತಿ ಭದ್ರತಾ ಸಿಬ್ಬಂದಿಗೆ:<br><br>ರೂಪಾಯಿಗಳು: ____________<br><br>(ರೂಪಾಯಿಗಳು____________________ಮಾತ್ರ) |

ಸೂಚನೆ: ಮೇಲ್ಕಾಣಿಸಿದ ಮೊತ್ತವು ಎಲ್ಲ ತೆರಿಗೆಗಳು &ಸುಂಕಗಳನ್ನು ಒಳಗೊಂಡಿರತಕ್ಕದ್ದು.

ಸ್ಥಳ:

ದಿನಾಂಕ:

ಅಧಿಕೃತ ವ್ಯಕ್ತಿಯ ರುಜು.

ಹೆಸರು:

ಹುದ್ದೆ.

ಮೊಹರು.

J.C.C.T. (ADMN)
VAT DIVN. DWD.

## ಅನುಭಂದ – 3

ಭದ್ರತಾ ಸಿಬ್ಬಂದಿಗಳು ಕಾರ್ಯ ನಿರ್ವಹಿಸಬೇಕಾದ ಸ್ಥಳ.

| ಕ್ರ.ಸಂ | ಕಟ್ಟಡ ವಿಳಾಸ | ಕಟ್ಟಡ ಮೇಲ್ವಿಚಾರಣಾ ಕಚೇರಿಯ ದೂರವಾಣಿ ಸಂಖ್ಯೆ. |
|---|---|---|
| 1 | ವಾಣಿಜ್ಯ ತೆರಿಗೆ ಭವನ, ಡಿ.ಸಿ ಕಂಪೌಂಡ, ಧಾರವಾಡ | 0836– 2210173, 2210174 |
| 2 | ವಾಣಿಜ್ಯ ತೆರಿಗೆ ಸಂಕೀರ್ಣ, ನವನಗರ, ಹುಬ್ಬಳ್ಳಿ | 0836– 2210180 |

ಭದ್ರತಾ ಸಿಬ್ಬಂದಿ ಪೂರೈಕೆದಾರರ ಸಹಿ

J.C.C.T. (ADMN)
VAT DIVN. DWD.